**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

O.S. No 1626/2025
PW: 1

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 17.03.2026**

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ: ಶ್ರಿ . ಎ.ಆರ್.ಎಸ್ ರವರಿಂದ**

1. ನಾನು ಸನ್ 1976 ರಿಂದ 2007 ರವರೆಗೆ ಹೆಚ್.ಎ.ಎಲ್ ನಲ್ಲಿ ಸಹಾಯಕ ಮೇಲ್ವಿಚಾರಕನಾಗಿ ನಿವೃತ್ತಿ ಹೊಂದಿರುತ್ತೇನೆ. ನಾನು ಏಳನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ವಾದಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವಕೀಲರೇ ಬರೆದು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

2. ಪ್ರತಿವಾದಿ ನನ್ನ ಚಿಕ್ಕಮ್ಮನಾಗಬೇಕು. ಸದರಿಯವರು ಪಣತೂರಿನಲ್ಲಿ ವಾಸವಾಗಿದ್ದರು. ನಂತರ ಸ್ವಲ್ಪ ದಿನ ತಮಿಳುನಾಡಿನಲ್ಲಿ, ಆಮೇಲೆ ಬೆಂಗಳೂರಿನಲ್ಲಿ ವಾಸವಾಗಿದ್ದರು. ಯಾವ ವರ್ಷದಂದು ತಮಿಳುನಾಡಿನಲ್ಲಿ ವಾಸವಾಗಿದ್ದರು ಎಂದು ನನಗೆ ನೆನಪಿರುವುದಿಲ್ಲ. ನಿಪಿ-01 ಜಾರಿಯಾದ ದಿನದಿಂದ ಸುಮಾರು 06 ವರ್ಷಗಳ ನಂತರ ತಮಿಳುನಾಡಿಗೆ ಹೋಗಿರಬಹುದು. ಸದರಿ ವಿಷಯವನ್ನು ವಾದಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-01 ಛಾಪಾ ಕಾಗದವನ್ನು ಪ್ರತಿವಾದಿಯೇ ತೆಗೆದುಕೊಂಡು ಬಂದಿದ್ದರು. ಸದರಿ ಛಾಪಾ ಕಾಗದವನ್ನು ನವೆಂಬರ್ 1992 ನೇ ಸಾಲಿನ ಮುಂಚಿನ ಮೂರು ದಿನಗಳ ಹಿಂದೆ ತೆಗೆದುಕೊಂಡು ಬಂದಿದ್ದರು. ಛಾಪಾ ಕಾಗದವನ್ನು ಮಾತ್ರ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಛಾಪಾ ಕಾಗದವು ರೂಪಾಯಿ 10 ರೂ ಮೌಲ್ಯದ್ದಾಗಿರುತ್ತದೆ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ನನ್ನ ಚಿಕ್ಕಪ್ಪನಾದ ರಾಮರೆಡ್ಡಿ ಹಾಗೂ ನನ್ನ ಮಾವನಾದ ಕೃಷ್ಣಪ್ಪ ರವರನ್ನು ಭೇಟಿ ಮಾಡಿರುತ್ತೇನೆ.

3. ಪ್ರಸ್ತುತ ದಾವಾ ಸ್ವತ್ತಿನ ಸ್ವಾಧಿನಾನುಭವದಲ್ಲಿ ನಾನೇ ಇರುತ್ತೇನೆ. ನಿಪಿ-01 ರಂತೆ ಕರಾರು ಪತ್ರವಾದ ನಂತರ ನಾನೇ ಸ್ವಾಧೀನಾನುಭವದಲ್ಲಿ ಇರುತ್ತೇನೆ. ದಾವಾ ಸ್ವತ್ತಿನಲ್ಲಿ ಹುಲ್ಲು ಬೆಳೆಸಿರುತ್ತೇನೆ. ದಾವಾ ಸ್ವತ್ತಿನ ಛಾಯಾಚಿತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತಿನ ಛಾಯಾಚಿತ್ರಗಳನ್ನು ಸಲ್ಲಿಸಲು ಅಭ್ಯಂತರ ಇರುವುದಿಲ್ಲ. ದಾವಾ ಸ್ವತ್ತಿನ ಮೇಲೆ ರೈಲ್ವೆ ಇಲಾಖೆಯವರು ಮಣ್ಣನ್ನು ಹಾಕಿರುತ್ತಾರೆ. ನಾನು ರೈಲ್ವೆ

ಇಲಾಖೆಯವರಿಗೆ ಯಾವುದೇ ಅನುಮತಿ ನೀಡಿರುವುದಿಲ್ಲ. ಪ್ರತಿವಾದಿ ಹಾಗೂ ಅವರ ಮಕ್ಕಳು ದಾವಾ ಸ್ವತ್ತಿನಲ್ಲಿ ಮಣ್ಣನ್ನು ಹಾಕಿ ಸಮಗೊಳಿಸಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ-01 ರ ಕ್ಕಿಂತ ಪೂರ್ವದಲ್ಲಿ ಹಾಗೂ ನಂತರ ಎರಡು ಭಾರಿ ನಾನು ಮುನಿಯಮ್ಮರವರನ್ನು ಭೇಟಿ ಮಾಡಿರುತ್ತೇನೆ. ನಿಪಿ-01 ಆದ ನಂತರ ಸುಮಾರು 10 ವರ್ಷಗಳು ಆದ ಮೇಲೆ ನಾನು ಮುನಿಯಮ್ಮರವರನ್ನು ಭೇಟಿ ಮಾಡಿರುತ್ತೇನೆ. ನಿಪಿ-01 ಅನ್ನು ರಾಮಕ್ಷಪ್ಪ ಛಾಪಾ ಕಾಗದ ಮಾರಾಟ ಮಾಡುವವರು ತಯಾರು ಮಾಡಿರುತ್ತಾರೆ. ನಿಪಿ-01 ಅನ್ನು ತಯಾರಿಸಲು ದಾವಾ ಸ್ವತ್ತಿನ ಮಾಹಿತಿಯನ್ನು ಮುನಿಯಮ್ಮರವರು ನೀಡಿರುತ್ತಾರೆ. ನನ್ನ ಚಿಕ್ಕಪ್ಪನವರು ಹಾಜರಿದ್ದ ಕಾರಣ ಮಾಹಿತಿಯನ್ನು ನಾನು ನೀಡಿರುವುದಿಲ್ಲ. ದಾವಾ ಸ್ವತ್ತು ಮುನಿಯಮ್ಮನಿಗೆ ಅವರ ತಂದೆಯ ಮೂಲಕ ಬಂದಿರುತ್ತದೆ. ಆದರೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾನ ಪತ್ರದ ಮೂಲಕ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ವಾದ ಪತ್ರದ ಮಾಹಿತಿಯನ್ನು ನಮ್ಮ ಚಿಕ್ಕಪ್ಪನವರು ನೀಡಿರುತ್ತಾರೆ. ನಿಪಿ-01 ಕ್ಕೆ ನಮ್ಮ ಚಿಕ್ಕಪ್ಪನವರು ಮಾಹಿತಿ ನೀಡಿರುತ್ತಾರೆ.

ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**